**ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ**

**ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ.8/2023**

**ಫಿರ್ಯಾದಿ** - ಸರ್ಕಾರದ ಪರವಾಗಿ **ಚಿಕ್ಕಜಾಜೂರು** ಪೊಲೀಸರು

**- ವಿರುದ್ಧ -**

**ಆರೋಪಿಗಳು** -

1) **ಗಣೇಶ ತಂದೆ ದೇವೆಂದ್ರಪ್ಪ** ,
25 ವರ್ಷ, ಲಿಂಗಾಯುತ ಜನಾಂಗ ,
ವಾಸಃ ಬಿ ದುರ್ಗ ಗ್ರಾಮ , ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ.

2) **ಅಭಿಷೇಕ ತಂದೆ ವಿಜಯ ಕುಮಾರ** ,
25 ವರ್ಷ, ಲಿಂಗಾಯುತ ಜನಾಂಗ ,
ವಾಸಃ ಬಿ ದುರ್ಗ ಗ್ರಾಮ , ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ.

## —:: ದೋಷಾರೋಪಣೆ ::—

**ಶ್ರೀಮತಿ ಬಿ.ಕೆ. ಕೋಮಲ , ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ** ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ..

1. ದಿಃ 14.09.2022 ರಂದು ಸಂಜೆ 5.20 ಗಂಟೆಯಲ್ಲಿ ಹೊಳಲ್ಕೆರೆ ತಾಲ್ಲೂಕು ಬಿ ದುರ್ಗ ಗ್ರಾಮದ ಶ್ರೀ ಕಾಶಿ ಮಹಲಿಂಗಸ್ವಾಮಿ ಪ್ರೌಡಶಾಲೆಯ ವಾಲಿಬಾಲ್ ಆಟದ ಅಂಕಣದಲ್ಲಿ ಸಾಮಾನ ಉದ್ದೇಶದಿಂದ ಆರೋಪಿಗಳಾದ ನೀವು ಚಾಸಾ-5 ದೇವರಾಜ ಅವರಿಗೆ ನೀನು ನಾಯಕ ಜಾತಿಯವನು ಇಲ್ಲಿ ಆಟ ಆಡುವಂತೆ ಇಲ್ಲ , ನಾಯಕ ಸೂಳೆ ಮಗನೇ ಎಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ**

**34 ಮತ್ತು ಎಸ್ ಸಿ /ಎಸ್ ಟಿ ದೌರ್ಜನ್ಯ ತಡೆ ಕಾಯಿದೆ 3(1) (ಆರ್ )(ಎಸ್) ರ** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದೀರಿ .

**2.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ 5 ರವರಿಗೆ ಕೈ ಕಾಲುಗಳಿಂದ ಕಣ್ಣು, ತುಟಿ , ಎದೆ , ಹೊಟ್ಟೆ ಗೆ ಹೊಡೆದು ಆತನಕೊರಳ ಪಟ್ಟಿಹಿಡಿದುಕೂಂಡು ಸಿಮೆಂಟ್ ರಸ್ತೆ ಮೇಲೆ ಎಳೆದುಕೊಂಡು ಹೋಗಿ ಶ್ರೀ ಮಹಲಿಂಗಸ್ವಾ ವಿಳು ಪ್ಪ ಹೋಗುವ ರಸ್ತೆ ಮೇಲೆ ಪುನಃ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ನೋವುಂಟು ಮಾಡಿದ್ದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದೀರಿ .

**3.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಚಾಸಾ 5 ರವರಿಗೆ ನಿಮ್ಮ ಜನಾಂಗದವರನ್ನು ಬೆಂಕಿ ಹಚ್ಚಿ ಸುಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ** 506 ಸಹವಾಚಕ 34 **ರ** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದೀರಿ .

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಬಿ.ಕೆ. ಕೋಮಲ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಚಿತ್ರದುರ್ಗ.